ಮೂವರು ಹೆಣ್ಣುಮಕ್ಕಳು ಮಾತ್ರ ತಪ್ಪದೇ ಎಲ್ಲ ಮೆರವಣಿಗೆಯಲ್ಲೂ ಹೋಗ್ತಾ ಇದ್ದೆವು.

...ಆಮೇಲೆ, ಮೀರಾ ನಾಯಕ, ವಿಜಯಾ ದಬ್ಬೆ. ಜಿ.ಎಚ್. ನಾಯಕ ಮುಂತಾದವರು ಹುಟ್ಟು ಹಾಕಿದ 'ಸಮತಾ' ಸಂಘಟನೆಯಲ್ಲಿ ತೊಡಗಿಕೊಂಡೆ. ಇದರಲ್ಲಿ ನಾನು ಮುಂಚೂಣಿಯಲ್ಲಿ ಇರಬೇಕು, ನಾಯಕತ್ವ ತಗೋಬೇಕು ಅಂತ ಏನೂ ಅನ್ನಿಸ್ತಿರಲಿಲ್ಲ. ಇವರು ಧ್ವನಿ ಎತ್ತುತ್ತ ಇದ್ದ ಕಾರಣಗಳನ್ನ ನಾನು ಒಪ್ಪಿಕೊಂಡಿದ್ದೆ, ಇದರಿಂದ ಸಮಾಜಕ್ಕೆ ಒಳ್ಳೆಯದಾಗಬೇಕು ಅಂತ ಮನಸ್ಸಲ್ಲಿತ್ತು... ಎಲ್ಲರ ಜೊತೆ ನಾನೂ ಅಂತ ಅಷ್ಟೇ... ಆಗೆಲ್ಲ ಇಂತಹ ಪ್ರತಿರೋಧಗಳಿಂದ ರಾಜಕಾರಣದಲ್ಲಿ, ಅಧಿಕಾರಸ್ತರಲ್ಲಿ ಸ್ವಲ್ಪವಾದರೂ ಸಕಾರಾತ್ಮಕ ಬದಲಾವಣೆ ಆಗ್ತಾ ಇತ್ತು. ಆದರೆ ಇವತ್ತು ಸತ್ಯಾಗ್ರಹ, ಪ್ರತಿಭಟನೆಗಳೆಲ್ಲ ಅರ್ಥ ಕಳಕೊಳ್ತಾ ಇವೆ. ಹಾಗಂತ ಇದರಿಂದ ಏನೂ ಆಗಲ್ಲ ಅಂತ ಸುಮ್ಮನೆ ಇರಬಾರದು, ಏನಾದರೂ ಮಾಡ್ತಾ ಇರಬೇಕು. ಯಾವುದಾದರೂ ಸ್ವರೂಪದಲ್ಲಿ ಎಲ್ಲೆಲ್ಲಿಯೋ ಬದಲಾವಣೆ ಆಗ್ತಾ ಇರುತ್ತೆ ಅನ್ನೋ ನಂಬಿಕೆ ಕಳಕೊಳ್ಳಬಾರದು. ಈಗ ನೋಡಿ, ಹಾಸನದಲ್ಲಿ ಇತ್ತೀಚೆಗೆ ನಡೆದ 'ಸಿ.ಡಿ. ಪ್ರಕರಣ'ದ ಬೃಹತ್ ಪ್ರತಿಭಟನೆಯಲ್ಲಿ ಎಷ್ಟೊಂದು ಸಂಘಟನೆಗಳು, ಜನರು ಸ್ವಇಚ್ಛೆಯಿಂದ ಪಾಲ್ಗೊಂಡಿದ್ರು ಅಲ್ವಾ? ಮನುಷ್ಯನ ಒಳಗೆ ಆತ್ಮಸಾಕ್ಷಿ ಅನ್ನೋದು ಇದ್ದೇ ಇದೆ ಅನ್ನೋದಕ್ಕೆ ಇದು ಸಾಕ್ಷಿ. ನೋಡಿ... ಏನಾದರೂ ನಮ್ಮಿಂದ ತಪ್ಪಾಗಿದ್ದರೆ ಅದನ್ನ ಒಪ್ಪಿಕೊಂಡು, ತಿದ್ದಿಕೊಂಡು ಬಿಡಬೇಕು... ಈ ಪ್ರಕರಣದಿಂದ ಇಡೀ ಊರಿಗೇ ಕೆಟ್ಟ ಹೆಸರು ಬಂತು... ನಮ್ಮ ಮನಸ್ಸಾಕ್ಷಿ ಇದ್ದಾಗ ಮಾತ್ರ ತಿದ್ದಿಕೊಳ್ಳೋಕಾಗುತ್ತೆ ಅಲ್ವಾ...

◆ **ನೀವು ಹೇಳುತ್ತ ಇರುವ ಆಗಿನ ಲೋಕಕ್ಕೂ, ಜಾತಿಜಾತಿಯ ನಡುವೆ ದೊಡ್ಡ ಗೋಡೆಗಳು ಎದ್ದಿರುವ, ಮನಸ್ಸುಗಳು ವಿಷವಾಗಿರುವ ಈ ಹೊತ್ತಿನ ಲೋಕಕ್ಕೂ ಏನಾದರೂ ಸಂಬಂಧ ಇದೆ ಅನ್ನುತ್ತಾ? ಮನುಷ್ಯ ನಾಗರಿಕನಾದಷ್ಟೂ ಸುಸಂಸ್ಕೃತನಾಗುತ್ತಾನೆ ಅನ್ನೋದಕ್ಕೆ ಖಾತ್ರಿ ಇಲ್ಲ ಅನ್ನಿಸುವ ವಾತಾವರಣ ನಮ್ಮ ಸುತ್ತ ಇದೆ. ಮನುಷ್ಯನನ್ನು ಮನುಷ್ಯನಾಗಿ ನೋಡಲಾಗದ ಜನರ ಮನಸ್ಥಿತಿಯನ್ನು ನೋಡಿದರೆ ನಾವು**



ಪದ್ಮಾ ಶ್ರೀರಾಮ್ ಅವರು ಗೃಹಿಣಿ ಮತ್ತು ಕೃಷಿಕರು. ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು. ವಿಜ್ಞಾನ ಮತ್ತು ಸಸ್ಯ ಜೀವನದ ಬಗ್ಗೆ ಕನ್ನಡದಲ್ಲಿ ಬರೆದಿರುವ ಅವರು, 'ಮಯೂರ' ಮಾಸಪತ್ರಿಕೆಗೆ ಸಸ್ಯಜೀವನದ ಕುರಿತು ಬರೆದ ಲೇಖನಗಳನ್ನು 'ಗಿಡಗಂಟೆಯಾ ಕೊರಳು' ಶೀರ್ಷಿಕೆಯ ಪುಸ್ತಕವಾಗಿ ಪ್ರಕಟಿಸಿದ್ದಾರೆ. ಮಿಸ್ ಬಾಮಾ ಅವರ 'ಸಂಗತಿ' ಎಂಬ ತಮಿಳು ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಪದ್ಮಾ ಶ್ರೀರಾಮ್ ಸಾಮಾನ್ಯ ಆಸಕ್ತಿಯ ವಿಷಯಗಳ ಬಗ್ಗೆ ಭಾಷಣಕಾರರಾಗಿ ಮೈಸೂರು ಆಕಾಶವಾಣಿ ಕೇಳುಗರಿಗೆ ಚಿರಪರಿಚಿತ ಹೆಸರು.